# ಮುಗ್ಧಾ 'ವಿಶೇಷ ಅನುಭವ'!



ಅಲ್ಲಲ್ಲಿ ರಾಹುಲ್ ದೇವ್ ಜೊತೆಗೆ ಓಡಾಡಿಕೊಂಡು ಕಣ್ಣಿಗೆ ಬೀಳುತ್ತಿದ್ದ ನಟಿ, ರೂಪದರ್ಶಿ ಮುಗ್ಧಾ ಗೋಡ್ಸೆ ತಮ್ಮಿಬ್ಬರ ಸಂಬಂಧವನ್ನು ಮುಕ್ತವಾಗಿ ಒಪ್ಪಿಕೊಂಡಿದ್ದಾಳೆ. ಇತ್ತೀಚೆಗೆ ರಾಹುಲ್ ಜೊತೆ ಬೀಚ್‌ನಲ್ಲಿ ಸುತ್ತಾಡಿದ್ದ ಬಳಿಕ ಮುಚ್ಚಿಡುವುದು ಏನೂ ಇಲ್ಲ ಎಂದು ಇಬ್ಬರೂ ಡೇಟಿಂಗ್ ನಡೆಸುತ್ತಿರುವುದನ್ನು ಆಕೆ ಬಹಿರಂಗಪಡಿಸಿದ್ದಾಳೆ. ಇಬ್ಬರದೂ ಈಗ ಸ್ನೇಹಕ್ಕೂ ಮೀರಿದ ಸಂಬಂಧ. ಇದೊಂಥರ ವಿಶೇಷ ಅನುಭವ ಎನ್ನುವುದು ಮುಗ್ಧಾ ಪುಳಕ.

ಇಬ್ಬರ ನಡುವಿನ ಸ್ನೇಹ ಮತ್ತೊಂದು ಘಟ್ಟಕ್ಕೆ ತಲುಪಿದಾಗ ಅದು ಕೆಲಸದ ಮೇಲೂ ಪರಿಣಾಮ ಬೀರುತ್ತದೆ ಎನ್ನುವ ಅನುಭವ ಸಹ ಆಕೆಗಾಗಿದೆ. ಕೇವಲ ಸ್ನೇಹಕ್ಕಿಂತ ಮೀರಿದ ಸಂಬಂಧವಿದ್ದಾಗ ಒಟ್ಟಿಗೆ ಕೆಲಸ ಮಾಡುವುದು ಸುಲಭ. ಈಗ ರಾಹುಲ್ ಜೊತೆ ಕೆಲಸ ಮಾಡುವಾಗ ಯಾವುದೇ ಅಳುಕು ಇರುವುದಿಲ್ಲ. 'ಮದುವೆಗಳು ಸ್ವರ್ಗದಲ್ಲಿ ನಿಶ್ಚಯವಾಗುತ್ತವೆ. ಹೀಗಾಗಿ ಮದುವೆಗೆ ಯಾವುದೇ ಆತುರವಿಲ್ಲ. ಪೋಷಕರಿಂದಲೂ ಒತ್ತಡವಿಲ್ಲ. ಯಾವಾಗ ಅದು ಆಗಬೇಕೋ ಆಗ ಆಗುತ್ತದೆ' ಎಂದು ನಿರುಮ್ಮಳತೆಯಿಂದ ಹೇಳಿಕೊಂಡಿದ್ದಾಳೆ 33ರ ಹರೆಯದ ಆಕೆ. 47 ವರ್ಷದ ರಾಹುಲ್ ಮತ್ತು ತನ್ನ ವಯಸ್ಸಿನ ಅಂತರದ ಬಗ್ಗೆ ಮುಗ್ಧಾ ತಲೆ ಕೆಡಿಸಿಕೊಂಡಿಲ್ಲ.

2008ರಲ್ಲಿ ಮಧುರ್ ಭಂಡಾರ್ಕರ್ ನಿರ್ದೇಶನದ 'ಫ್ಯಾಷನ್' ಚಿತ್ರದ ಮೂಲಕ ಸಿನಿಮಾ ರಂಗಕ್ಕೆ ಕಾಲಿಟ್ಟ ಮುಗ್ಧಾ, ಶೀಘ್ರದಲ್ಲಿಯೇ ರಾಹುಲ್ ಜೊತೆ ತೆರೆ ಹಂಚಿಕೊಳ್ಳಲಿದ್ದಾಳೆ. 'ದಸ್', 'ಅಶೋಕ'ದಂತಹ ಚಿತ್ರಗಳಲ್ಲಿ ನಟಿಸಿದ್ದ ರಾಹುಲ್, ಸನ್ನಿ ಲಿಯೊನ್ ಅಭಿನಯದ 'ಏಕ್ ಪಹೇಲಿ ಲೀಲಾ' ಚಿತ್ರದಲ್ಲೂ ನಟಿಸಿದ್ದ.

# ಬಾಜಿರಾವ್– ದಿಲ್‌ವಾಲೆ ಸಂಘರ್ಷ!



ದೀಪಿಕಾ ಪಡುಕೋಣೆ, ರಣವೀರ್ ಸಿಂಗ್ ಮತ್ತು ಪ್ರಿಯಾಂಕಾ ಚೋಪ್ರಾ ಅಭಿನಯದ, ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನದ 'ಬಾಜಿರಾವ್ ಮಸ್ತಾನಿ' ಮತ್ತು ರೋಹಿತ್ ಶೆಟ್ಟಿ ಆ್ಯಕ್ಷನ್ ಕಟ್ ಹೇಳಿರುವ ಶಾರುಖ್ ಖಾನ್, ಕಾಜೋಲ್, ವರುಣ್ ಧವನ್ ಮತ್ತು ಕೃತಿ ಸನೊನ್ ನಟಿಸಿರುವ 'ದಿಲ್‌ವಾಲೆ' ಎರಡೂ ಚಿತ್ರಗಳು ಡಿಸೆಂಬರ್ 18ರಂದು ತೆರೆಕಾಣಲು ಮುಹೂರ್ತ ನಿಗದಿಯಾಗಿದೆ. ಪ್ರೇಕ್ಷಕರಿಗೆ ಎರಡೆರಡು ಸಂಭ್ರಮವಾದರೆ, ಚಿತ್ರತಂಡಗಳಿಗೆ ಇದು ಸಂಕಟದ ಸಮಯ. ಏಕೆಂದರೆ ಎರಡು ಪ್ರಮುಖ ಚಿತ್ರಗಳು ಒಂದೇ ಬಾರಿಗೆ ಬಿಡುಗಡೆಯಾಗುವುದೆಂದರೆ ಒಂದಕ್ಕೊಂದು ಸಂಘರ್ಷಕ್ಕಿಳಿದಂತೆಯೇ.

ಸೂಪರ್‌ಸ್ಟಾರ್‌ಗಳ ಚಿತ್ರ ಒಂದೇ ದಿನದಂದು ಬಿಡುಗಡೆಯಾಗುವುದು ದುರದೃಷ್ಟಕರ ಎಂದು ಪ್ರಿಯಾಂಕಾ ಚೋಪ್ರಾ ಹೇಳಿದ್ದಾಳೆ. 'ಎರಡೂ ಸಿನಿಮಾಗಳು ಒಂದಕ್ಕಿಂತ ಒಂದು ವಿಭಿನ್ನ. ಹೀಗಾಗಿ ಗಳಿಕೆ ಮಟ್ಟದಲ್ಲಿ ಸಿನಿಮಾಗಳು ಚೆನ್ನಾಗಿಯೇ ಓಡಲಿವೆ. ಅಂತಹ ಭರವಸೆ ಇದೆ. ದಿಲ್‌ವಾಲೆ ಚಿತ್ರತಂಡಕ್ಕೆ ಒಳಿತಾಗಲು ಹಾರೈಸುವೆ' ಎಂದೂ ಪಿಗ್ಗಿ ಹೇಳಿಕೆ ನೀಡಿದ್ದಾಳೆ.

ಸದ್ಯ ಪಿಗ್ಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಲ್ಲಿದ್ದಾಳೆ. 'ಕ್ವೊಂಟಿಕೊ' ಎಂಬ ಅಮೆರಿಕನ್ ಟೆಲಿವಿಷನ್‌ನ ಥ್ರಿಲ್ಲರ್ ಸರಣಿಯಲ್ಲಿ ಆಕೆ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾಳೆ. ಅದಕ್ಕೆ ಉತ್ತಮ ಪ್ರತಿಕ್ರಿಯೆಯೂ ವ್ಯಕ್ತವಾಗಿದೆ. ಅದರ ಚಿತ್ರೀಕರಣದಲ್ಲಿ ಬಿಜಿಯಾಗಿರುವ ಪ್ರಿಯಾಂಕಾಗೆ, ಈ ಚಿತ್ರದ ಪ್ರಚಾರದಲ್ಲಿ ಸರಿಯಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಆದರೆ ಬಿಡುವು ಮಾಡಿಕೊಂಡು ದೇಶ ಮತ್ತು ವಿದೇಶದಲ್ಲಿ ಪ್ರಚಾರದಲ್ಲಿ ತೊಡಗಿಕೊಳ್ಳುವುದಾಗಿ ಭರವಸೆ ನೀಡಿದ್ದಾಳೆ. ಈ ಚಿತ್ರದಲ್ಲಿ ರಣವೀರ್ ಪೇಶ್ವಾ ಬಾಜಿರಾವ್ ಆಗಿ ಕಾಣಿಸಿಕೊಂಡರೆ, ಪಿಗ್ಗಿ ಆತನ ಎರಡನೇ ಹೆಂಡತಿ ಕಾಶಿಬಾಯಿಯಾಗಿ ಕಾಣಿಸಿಕೊಳ್ಳುತ್ತಿದ್ದಾಳೆ. ದೀಪಿಕಾಗೆ ಮೊದಲ ಹೆಂಡತಿ ಮಸ್ತಾನಿಯ ಪಾತ್ರ.

■ ಅಮಿ

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65